# ಸಂವಿಧಾನದ ಆಶಯಗಳಿಗೆ ವಿರುದ್ಧವಾದ ತೀರ್ಪು

09 Feb 2016

ದೇಶದ ಭೂಪ್ರದೇಶದೊಳಗಿರುವ ಯಾವುದೇ ರಾಜ್ಯವು ಅದರ ಯಾವುದೇ ವ್ಯಕ್ತಿಯ ಕಾನೂನುಬದ್ಧ ಸಮಾನತೆಯನ್ನು ನಿರಾಕರಿಸುವಂತಿಲ್ಲ ಅಥವಾ ರಾಜ್ಯಗಳು ದೇಶದೊಳಗಿರುವ ಎಲ್ಲಾ ವ್ಯಕ್ತಿಗಳಿಗೂ ಸಮಾನ ಕಾನೂನಿನ ರಕ್ಷಣೆಯನ್ನು ನೀಡಬೇಕು ಎನ್ನುತ್ತದೆ ಭಾರತ ಸಂವಿಧಾನದ **14**ನೇ ಕಲಂ.

ಪಂಚಾಯತ್‌ಗಳ ಚುನಾವಣೆಗೆ ಸ್ಪರ್ಧಿ ಸಲು ಸ್ಪರ್ಧಾರ್ಥಿಗಳು ಕನಿಷ್ಠ ವಿದ್ಯಾರ್ಹತೆ ಹೊಂದಿರಬೇಕು ಎಂಬ ಬಗ್ಗೆ ಹರಿಯಾಣ ಸರ್ಕಾರ ಕಳೆದ ಸೆಪ್ಟೆಂಬರ್‌ನಲ್ಲಿ ತಂದಿದ್ದ ಪಂಚಾಯತ್ ರಾಜ್ ಕಾಯಿದೆ ತಿದ್ದುಪಡಿ ಮಸೂದೆಯನ್ನು ಡಿ.10ರಂದು ಸರ್ವೋಚ್ಚ ನ್ಯಾಯಾಲಯ ಎತ್ತಿ ಹಿಡಿದಿದೆ. ಇದರಿಂದಾಗಿ ಸರ್ವರನ್ನೊಳಗೊಂಡ ಗ್ರಾಮೀಣಾಭಿವೃದ್ಧಿಯ ಬುಡಕ್ಕೇ ಕೊಡಲಿ ಏಟು ಬಿದ್ದಂತಾಗಿದೆ. ಧ್ವನಿಯಿಲ್ಲದವರ ಗಂಟಲು ಒತ್ತಿ ಹಿಡಿದು ಕೂಗು ಎಂದಂತಾಗಿದೆ. ಇದು ದೇಶದಲ್ಲಿ ಮುಂಚೂಣಿಯಲ್ಲಿರುವ ಕ್ರಾಂತಿಕಾರಿ ಪಂಚಾಯತ್ ರಾಜ್ ಬೆಳವಣಿಗೆಗೆ ಹಿನ್ನಡೆ.

**ಗ್ರಾಮ ಸ್ವರಾಜ್ಯ**

**ಕೃಪಾ ಎಂ.ಎಂ.**

edit@vishwavani.news



ಹರಿಯಾಣದ ಪಂ.ರಾ.ಕಾ. ತಿದ್ದುಪಡಿ ಮಸೂದೆ ಹೇಳುವುದೇನೆಂದರೆ: ಪಂಚಾಯತ್ ರಾಜ್ ಸಂಸ್ಥೆಗಳಿಗೆ ಚುನಾವಣೆಗೆ ಸ್ಪ ಧಿಸುವುದಕ್ಕೆ ಇರಬೇಕಾದ ವಿದ್ಯಾರ್ಹತೆಗಳು: ಸಾಮಾನ್ಯ ವರ್ಗದ ಪುರುಷರಿಗೆ ಕನಿಷ್ಠ ವಿದ್ಯಾರ್ಹತೆ ಮೆಟ್ರಿಕ್ಯುಲೇಷನ್, ಸಾಮಾನ್ಯ ವರ್ಗದ ಮಹಿಳೆಯರಿಗೆ ಕನಿಷ್ಠ ವಿದ್ಯಾರ್ಹತೆ 8ನೇ ತರಗತಿ, ಪರಿಶಿಷ್ಟ ಜಾತಿಯ ಪುರುಷರಿಗೆ ಕನಿಷ್ಠ ವಿದ್ಯಾರ್ಹತೆ 8ನೇ ತರಗತಿ, ಪರಿಶಿಷ್ಟ ಜಾತಿಯ ಮಹಿಳೆಯರಿಗೆ ಕನಿಷ್ಠ ವಿದ್ಯಾರ್ಹತೆ 5ನೇ ತರಗತಿ, ಎಲ್ಲ ಅಭ್ಯರ್ಥಿಗಳ ಮನೆಯಲ್ಲೂ ಸುಸ್ಥಿತಿಯಲ್ಲಿರುವ ಶೌಚಗೃಹ ಇರಬೇಕು, ಸಹಕಾರಿ ಬ್ಯಾಂಕ್‌ಗಳಲ್ಲಿ ಯಾವುದೇ ಸಾಲ ಇರಕೂಡದು ಹಾಗೂ ನಿಯತವಾಗಿ ವಿದ್ಯುತ್ ಬಿಲ್ ಪಾವತಿಸಿರಬೇಕು. ಇದನ್ನು ಪ್ರಶ್ನಿಸಿ ಕೆಲವರು ಸರ್ವೋಚ್ಚ ನ್ಯಾಯಾಲಯಕ್ಕೆ ಅರ್ಜಿ ಹಾಕಿದ್ದರಿಂದ ಸೆ. 18ರಂದು ಕಾನೂನು ಜಾರಿಯಾಗ ದಂತೆ ತಡೆಯಾe ವಿ ಧಿಸಿತ್ತು. ಆದರೆ ಈಗ ಅದೇ ಮಸೂದೆಯನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದು ಪಟ್ಟಭದ್ರ ಹಿತಾಸಕ್ತಿಗಳು ಚಿಗುರೊಡೆಯುವಂತಾಗಿದೆ.

ಇಂತಹುದೇ ರೀತಿಯ ರಾಜಸ್ಥಾನದ ಪಂ.ರಾ.ಕಾ. ತಿದ್ದುಪಡಿ ಮಸೂದೆ 2015 ಮಾರ್ಚ್‌ನಲ್ಲಿ ಅಂಗೀಕಾರಗೊಂಡಿತು. ಅದರ ಪ್ರಕಾರ ಜಿಲ್ಲಾ ಪಂಚಾಯತ್ ಮತ್ತು ಸಮಿತಿಗಳಿಗೆ ಸ್ಪ ಧಿಸಬೇಕಾದರೆ ಕನಿಷ್ಠ 10ನೇ ತರಗತಿ ಉತ್ತೀರ್ಣರಾಗಿರಬೇಕು; ಗ್ರಾ.ಪಂ. ಚುನಾವಣೆಗೆ ಸ್ಪ ಧಿಸಲು ಕನಿಷ್ಠ 8ನೇ ತರಗತಿ, ಪ.ಜಾ, ಪಂ.ದವರಾದರೆ ಕನಿಷ್ಠ 5ನೇ ತರಗತಿ ಉತ್ತೀರ್ಣರಾಗಿರಬೇಕು.

ಈ ಬಗ್ಗೆ ಕರ್ನಾಟಕ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವ ಎಚ್. ಕೆ. ಪಾಟೀಲರು ಒಂದು ಹೇಳಿಕೆ ನೀಡಿದರು. ಅದೆಂದರೆ: 'ಹರಿಯಾಣ ಸರ್ಕಾರ ಜಾರಿಗೆ ತಂದಿರುವ ಕಾಯ್ದೆ ಮಹತ್ವದ್ದು. ವಿದ್ಯಾವಂತರು ಅ ಧಿಕಾರ ಚುಕ್ಕಾಣಿ ಹಿಡಿದರೆ ನೈಜ ಅಭಿವೃದ್ಧಿ ಸಾಧ್ಯ ಎಂಬ ಕಲ್ಪನೆಯ ಹಿನ್ನೆಲೆಯಲ್ಲಿ ಹರಿಯಾಣ ಸರ್ಕಾರದ ಕಾಯ್ದೆಯನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದಿದೆ. ರಾಜ್ಯದ ವಾತಾವರಣವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಈ ನಿಟ್ಟಿನಲ್ಲಿ ಪ್ರಯತ್ನ ನಡೆಸಲಿದೆ'.

ಆದರೆ ನಮ್ಮ ದೇಶದ ಪ್ರಸ್ತುತ ಪರಿಸ್ಥಿತಿಯಲ್ಲಿ ಇಂತಹ ತೀರ್ಮಾನಗಳು, ತೀರ್ಪುಗಳು ಯಾವುದೇ ಕಾರಣಕ್ಕೂ ಸಮಂಜಸವಲ್ಲ; ಅಲ್ಲದೇ ಅಭಾಸವೂ ಕೂಡ ಹೌದು. ಅಂತಹ ಆಲೋಚನೆಗಳೂ ಸಹ ಅಸಂಬದ್ಧವೆನಿಸುತ್ತವೆ. ಇದೊಂದು ರೀತಿಯಲ್ಲಿ ದೇಶದ ಯಾವುದೋ ಮೂಲೆಯಲ್ಲಿ ವಾಸಿಸುತ್ತಿರುವ, ಒಬ್ಬ ಸಾಮಾನ್ಯ ವ್ಯಕ್ತಿಯು ತನ್ನದಲ್ಲದ ತಪ್ಪಿಗೆ ತಾನು ಶಿಕ್ಷೆ ಅನುಭವಿಸಿದಂತೆ; ಯಾರೋ ಮಾಡಿದ ತಪ್ಪುಗಳಿಗೆ ಬಲಿಯಾಗಿರುವ, ಬಲಿಯಾಗುತ್ತಿರುವ ಪರಿಸ್ಥಿತಿಯಲ್ಲಿ ಗಾಯದ ಮೇಲೆ ಬರೆ ಎಳೆದಂತೆ. ವಾಸಿಯಾಗದೇ ಉರಿಯುತ್ತಿರುವ ಆ ಗಾಯಕ್ಕೆ ಉಪ್ಪು ಹಾಕಿದಂತೆ ಅನ್ನಿಸುತ್ತದೆ.

ಇಷ್ಟೇ ಅಲ್ಲದೆ ಅರ್ಹತಾ ಪಟ್ಟಿಗೆ ಸೇರುವ ಮನೆಗಳಲ್ಲಿ ಸುಸ್ಥಿತಿಯಲ್ಲಿರುವ ಶೌಚಾಲಯವನ್ನು ಹೊಂದಿರಬೇಕು, ಸಹಕಾರಿ ಬ್ಯಾಂಕ್‌ಗಳಲ್ಲಿ ಯಾವುದೇ ಸಾಲ ಇರಕೂಡದು ಹಾಗೂ ನಿಯತವಾಗಿ ವಿದ್ಯುತ್ ಬಿಲ್ ಪಾವತಿಸಿರಬೇಕು ಇಂತಹ ನಿರ್ಬಂಧಗಳು ಬಡವರನ್ನು ಮೂಲೆಗುಂಪಾಗಿಸಲು ಕಾನೂನಾತ್ಮಕ ಚೌಕಟ್ಟು ಕೊಟ್ಟಂತಿದೆ. ದಿನನಿತ್ಯ ಕೆಲಸ ಮುಗಿಸಿ ಹೈರಾಣಾಗಿ ಬಂದು ವಿಶ್ರಮಿಸಿಕೊಳ್ಳಲು ಮೂರಡಿ ಜಾಗಕ್ಕೂ ಪರದಾಡುವ ಪರಿಸ್ಥಿತಿಯಿರುವ, ಪರರ ಜಾಗದಲ್ಲಿ ಸದಾ ಜೀವವನ್ನು ಕೈಯಲ್ಲಿ ಹಿಡಿದು ವಾಸಿಸಬೇಕಾದಂತಹ ಸಂದರ್ಭವಿರುವ ಅನೇಕರಿಗೆ ಮನೆಗಳಲ್ಲಿ ಶೌಚಾಲಯವಿರಲೇಬೇಕು, ಸಾಲ ಇರಕೂಡದು ಎಂಬಂತಹ ಕಾನೂನುಗಳು ಎಷ್ಟು ನ್ಯಾಯ ಒದಗಿಸಬಲ್ಲವು?

ದೇಶಕ್ಕೆ ಸ್ವಾತಂತ್ರ್ಯ ದೊರಕಿ 68 ವರ್ಷಗಳು ತುಂಬಿದರೂ ಶಿಕ್ಷಣದ ಪರಿಕಲ್ಪನೆಗೆ ಸ್ಪಷ್ಟ ಅರ್ಥ ನೀಡಲಾಗದೆ, ಬ್ರಿಟಿಷರು ಬಿಟ್ಟು ಹೋದ

ಸಾಂಪ್ರದಾಯಿಕ ಶಿಕ್ಷಣಕ್ಕೇ ಜೋತುಬಿದ್ದು, ಕಲಿಕೆಯ ಅರ್ಥವನ್ನು ತಿಳಿಯದೇ, ಸಾಕ್ಷರತೆಯ ಸಾಕ್ಷಾತ್ಕಾರವನ್ನು ಸಾಧ್ಯವಾಗಿಸಲಾಗದೆ, ಆರ್ಥಿಕವಾಗಿ ಸದೃಢ ಸಮಾಜವನ್ನು ರೂಪಿಸಲಾಗದೆ ಒದ್ದಾಡುತ್ತಿವೆ ನಮ್ಮ ಎಲ್ಲಾ ಸರ್ಕಾರಗಳು. ಸರ್ಕಾರಿ ದಾಖಲೆಗಳಲ್ಲಿ 100% ಸಾಕ್ಷರತೆಯನ್ನು ಸಾ ಧಿಸಲು ಮೇಲ್-ಹಂತದ ಸರ್ಕಾರಗಳು ಗ್ರಾಮೀಣ ಪ್ರದೇಶದ, ಜನರಿಗೆ ಅತ್ಯಂತ ಸಮೀಪದ ಸರ್ಕಾರವಾದ ಸ್ಥಳೀಯ ಸರ್ಕಾರಗಳನ್ನು ತಮ್ಮೆಲ್ಲ ಪ್ರಯೋಗಗಳ ಪ್ರಯೋಗಶಾಲೆಯನ್ನಾಗಿ ಮಾಡುತ್ತಿರುವಂತಹ ಪ್ರಯತ್ನಗಳಲ್ಲಿ ಇದೂ ಒಂದು ಎಂಬಂತೆ ಭಾಸವಾಗುತ್ತದೆ. ಇಂತಹ ಮಸೂದೆಗಳು ಹಾಗೂ ತೀರ್ಪುಗಳು ಸಾಮಾಜಿಕ ನ್ಯಾಯದ ಆಧಾರದ ಜನರ ಮೂಲಭೂತ ಹಕ್ಕಾದ ಸಮಾನತೆಯ ಹಕ್ಕನ್ನು ಉಲ್ಲಂಘಿಸುತ್ತವೆ.

ಪ್ರಸ್ತುತ ದೇಶದ ಪರಿಸ್ಥಿತಿಯನ್ನು ಅವಲೋಕಿಸಿದಾಗ, ಇಂತಹ ಕಾನೂನುಗಳಿಂದಾಗಿ ಜನಸಂಖ್ಯೆಯ ಬಹಳಷ್ಟು ಮಂದಿ ಚುನಾವಣೆಗೆ ಸ್ಪ ಧಿಸಲು ಅನರ್ಹರಾಗುತ್ತಾರೆ. ದೇಶದ ವಾಸ್ತವದ ಸ್ಥಿತಿಗತಿಗಳನ್ನು ಕಡೆಗಣಿಸಿ ಅಂಗೀಕರಿಸಿದ ಇಂತಹ ಕಾನೂನು ತಿದ್ದುಪಡಿಗಳು, ನೀಡಿದ ತೀರ್ಪುಗಳು ಪ್ರಾಥಮಿಕ ಶಿಕ್ಷಣ ಸೌಲಭ್ಯ ಹಾಗೂ ಗುಣಮಟ್ಟದ ಶಿಕ್ಷಣಕ್ಕೆ ಗಮನ ಕೊಡಬೇಕಾಗಿದ್ದ ಕೇಂದ್ರ-ರಾಜ್ಯ ಸರ್ಕಾರಗಳು, ಅವುಗಳನ್ನು ಕಡೆಗಣಿಸಿ ಉಂಟಾದ ತಪ್ಪಿಗೆ ಜನಸಾಮಾನ್ಯರನ್ನು ಶಿಕ್ಷಿಸಿದಂತಾಗುತ್ತದೆ. ಇದು ಗ್ರಾಮೀಣ ಭಾಗದ ದುರ್ಬಲ, ಅಸುರಕ್ಷಿತ ವರ್ಗದವರನ್ನು ರಾಜಕೀಯದಿಂದ ಹೊರಗಿಡುತ್ತದೆ. ಸ್ಥಳೀಯಾಡಳಿತ ವ್ಯವಸ್ಥೆಯಲ್ಲಿ ಸಕ್ರಿಯವಾಗಿ ಭಾಗವಹಿಸುವ ಮೂಲಕ ರಾಜಕೀಯವಾಗಿ ಸಶಕ್ತರಾಗಬಹುದಾದ ಅವರ ಅವಕಾಶಗಳಿಗೆ ಅಡ್ಡಿ ಉಂಟುಮಾಡುತ್ತದೆ.

ಸಾಕ್ಷರತೆಯು ಓದು-ಬರಹದ ಜ್ಞಾನವನ್ನು ನೀಡುತ್ತದೆ ನಿಜ; ಆದರೆ ಸಾಕ್ಷರತೆಯೇ ಶಿಕ್ಷಣವಲ್ಲ. ಶಿಕ್ಷಣವು ಅಗತ್ಯ ಮಾಹಿತಿ, ಜ್ಞಾನ, ಕೌಶಲಗಳನ್ನು ಪಡೆದುಕೊಂಡು ವ್ಯಕ್ತಿಯ ಸಾಮರ್ಥ್ಯಾಭಿವೃದ್ಧಿಗೆ ಪೂರಕವಾಗಿ ಸೂಕ್ತ ಸ್ಪಷ್ಟ ನಿರ್ಣಯಗಳನ್ನು ಕೈಗೊಳ್ಳುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಸಾಕ್ಷರತೆಯು ಸಾಮರ್ಥ್ಯಾಭಿವೃದ್ಧಿಯ ಒಂದು ಅಂಶ ಮಾತ್ರವೇ ಹೊರತು ಸಾಕ್ಷರತೆಯೇ ಸಾಮರ್ಥ್ಯಾಭಿವೃದ್ಧಿಯಲ್ಲ. ಹೀಗಾಗಿ ಸಾಕ್ಷರತೆಯೇ ಸಾಮರ್ಥ್ಯಾಭಿವೃದ್ಧಿಯನ್ನು ನಿರ್ಧರಿಸುವ ಹಂತಕ್ಕೆ ಏರಬಾರದು.

ಮೈಸೂರಿನ ಪಿರಿಯಾಪಟ್ಟಣದ ಜಾನಕಮ್ಮನವರು ಹೇಳಿದ ಮಾತು -'ಗ್ರಾಮ ಪಂಚಾಯತ್ ಚುನಾವಣೆಗೆ ಸ್ಪ ಧಿಸುವ ಅಭ್ಯರ್ಥಿಗೆ ವಿದ್ಯೆಯೇ ಅಗತ್ಯವಲ್ಲ. ನನಗೆ ವಿದ್ಯೆ ಇಲ್ಲ. 20 ವರ್ಷಗಳಿಂದ ಗ್ರಾಮ ಪಂಚಾಯತ್ ಸದಸ್ಯರಾಗಿ, ಅಧ್ಯಕ್ಷರಾಗಿ ಕೆಲಸ ಮಾಡಿದ್ದೇನೆ. ನಮ್ಮ ಪಂಚಾಯತ್ ವ್ಯಾಪ್ತಿಯಲ್ಲಿ ಒಂದು ಕೋಟಿ ಅನುದಾನ ಪಡೆದು ಬಡ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಕಟ್ಟಿಸಲಾಗಿದೆ. ಆದರೆ ಅಭ್ಯರ್ಥಿಯಾದವರಿಗೆ ಬುದ್ಧಿ ಇರಬೇಕು. ಆಲೋಚನೆ ಮಾಡುವ, ಜನರ ಅಗತ್ಯಗಳಿಗೆ ಸ್ಪಂದಿಸುವ ಗುಣ ಇರಬೇಕು.'

2011ರ ಜನಗಣತಿಯ ಪ್ರಕಾರ ಗ್ರಾಮೀಣ ಜನಸಂಖ್ಯೆ 83,34,63,448. ಅದರಲ್ಲಿ ಸಾಕ್ಷರರು 48,26,53,540 ಜನ. ಸರ್ಕಾರಿ ದಾಖಲೆಗಳ ಪ್ರಕಾರವೂ ಸಹ ಗ್ರಾಮೀಣ ಪ್ರದೇಶದಲ್ಲಿ ಕೇವಲ ಪ್ರತಿಶತ 58 ಜನ ಮಾತ್ರ ಸಾಕ್ಷರರು. ಅದರಲ್ಲೂ ಮಹಿಳಾ ಸಾಕ್ಷರರ ಸಂಖ್ಯೆ 20,13,72,009 ಅಂದರೆ ಕೇವಲ 24% ಮಾತ್ರ! ಇಂತಹ ಕಾನೂನುಗಳು, ತಿದ್ದುಪಡಿ ಮಸೂದೆಗಳು ಜಾರಿಗೆ ಬಂದರೆ 58% ಜನರು ಮಾತ್ರ, ಅದರಲ್ಲೂ ಕೇವಲ 24% ಮಹಿಳೆಯರು ಚುನಾವಣೆಗೆ ಸ್ಪ ಧಿಸಲು ಅರ್ಹತೆ ಪಡೆಯುತ್ತಾರೆ! ಇದು ಬದಿಗೊತ್ತಲ್ಪಟ್ಟವರನ್ನು ಇನ್ನೂ ಬದಿಗೊತ್ತಿ, ಹಿಂದುಳಿದವರನ್ನು ಮತ್ತಷ್ಟು ಹಿಂದಕ್ಕೆ ತಳ್ಳುತ್ತದೆ.

ಸಾಕ್ಷರತೆಯ ಮಟ್ಟ ಕಡಿಮೆ ಇರುವ ಅನೇಕರು ತಮ್ಮ ತಮ್ಮ ಪಂಚಾಯತ್‌ನಲ್ಲಿ ಉತ್ತಮ ಆಡಳಿತ ನಡೆಸಿದ್ದಲ್ಲದೆ, ಗ್ರಾಮದ ಅಭಿವೃದ್ಧಿಗೆ, ಸಮುದಾಯದ ಏಳ್ಗೆಗೆ ಶ್ರಮಿಸಿದ ಹಲವಾರು ಉದಾಹರಣೆಗಳು ನಮ್ಮೆದುರಿಗೆ ಇವೆ. ಅವರಿಗೆ ಅಕ್ಷರ ಜ್ಞಾನ ಇಲ್ಲದಿರಬಹುದು; ತಮ್ಮ ಹಳ್ಳಿಗಳ ಬಗ್ಗೆ ಕಾಳಜಿ ಇದೆ, ತಮ್ಮ ಸಮುದಾಯಗಳ ಏಳ್ಗೆಗೆ ಸಹಕರಿಸಬೇಕೆಂಬ ಹಂಬಲವಿದೆ, ಹಳ್ಳಿಗಳ ಅಭಿವೃದ್ಧಿಯೇ ದೇಶದ ಅಭಿವೃದ್ಧಿಗೆ ಮೂಲ ಎಂಬ ಜ್ಞಾನವಿದೆ, ಜನರನ್ನು, ಸಮುದಾಯವನ್ನು ವಿಶ್ವಾಸಕ್ಕೆ ತೆಗೆದುಕೊಂಡು ಒಟ್ಟಾಗಿ ಕಾರ್ಯನಿರ್ವಹಿಸುವ ಕೌಶಲವಿದೆ, ಅನುಭವವಿದೆ. ಕೇವಲ ವಿದ್ಯೆಯೊಂದಿದ್ದರೆ ಗಾಂ ಧಿಜಿಯ ಕನಸಿನ ಗ್ರಾಮ ಸ್ವರಾಜ್ಯ ನನಸಾಗಿಸಲು ಸಾಧ್ಯವಿಲ್ಲ.

ಹೀಗಾಗಿ ಕೇವಲ ಸಾಂಪ್ರದಾಯಿಕ ಶಿಕ್ಷಣಕ್ಕೆ ಮಹತ್ವ ನೀಡದೇ, ಎಲ್ಲಾ ಹಂತದ ಸರ್ಕಾರದ ಚುನಾಯಿತ ಪ್ರತಿನಿ ಧಿಗಳಿಗೆ ತಮ್ಮ ಪಾತ್ರ ಮತ್ತು ಜವಾಬ್ದಾರಿಯನ್ನು ನಿರ್ವಹಿಸಲು ಅಗತ್ಯವಾದ ವಿಷಯಾಧಾರಿತ ಸಾಮರ್ಥ್ಯಾಭಿವೃದ್ಧಿಯ ಅಗತ್ಯತೆಯನ್ನು ಮನಗಂಡು ಅಂತಹ ಶಿಕ್ಷಣಕ್ಕೆ ಸರ್ಕಾರ ಒತ್ತು ನೀಡಬೇಕು. ಆ ನಿಟ್ಟಿನಲ್ಲಿ ಇಂತಹ ಜಬಾಬ್ದಾರಿಯ ಸ್ಥಾನಕ್ಕೆ ಚುನಾಯಿತರಾಗಿ ಅ ಧಿಕಾರ ಸ್ವೀಕರಿಸುವ ಮೊದಲು, ತಮ್ಮ ಕರ್ತವ್ಯಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸಹಕಾರಿಯಾಗುವಂತಹ ವಿಷಯಾಧಾರಿತ ಸಾಮರ್ಥ್ಯಾಭಿವೃದ್ಧಿ ತರಬೇತಿಗಳನ್ನು ಕಡ್ಡಾಯಗೊಳಿಸಬೇಕು ಹಾಗೂ ಅಂತಹ ತರಬೇತಿಗಳು ಎಲ್ಲರಿಗೂ ಏಕರೂಪವಾಗಿರದೇ, ಪ್ರಸ್ತುತ ಪರಿಸ್ಥಿತಿ, ಚುನಾಯಿತ ಪ್ರತಿನಿ ಧಿಗಳ ಕಲಿಕಾ/ಶಿಕ್ಷಣದ ಮಟ್ಟವನ್ನು ಗಮನದಲ್ಲಿರಿಸಿಕೊಂಡು, ಆಯಾ ಸ್ತರದ ಸರ್ಕಾರಗಳಿಗೆ ಅಗತ್ಯವಿರುವ, ಆಯ್ಕೆಯಾದ ಪ್ರತಿನಿ ಧಿಗಳಿಗೆ ಅನುಗುಣವಾಗಿ ಸಾಮರ್ಥ್ಯಾಭಿವೃದ್ಧಿ ಮಾಡುವಂತಹ ವಿಕೇಂದ್ರೀಕೃತ ಕಾರ್ಯಕ್ರಮಗಳು ರೂಪಿತವಾಗಬೇಕು.

ನಮ್ಮ ದೇಶದ ಕಾನೂನುಗಳು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಬೇಕು. ಆಡಳಿತದ ಚುಕ್ಕಾಣಿ ಹಿಡಿಯುವ ಎಲ್ಲಾ ಹಂತದ ಸರ್ಕಾರದ ಚುನಾಯಿತ ಪ್ರತಿನಿ ಧಿಗಳಿಗೂ ಅವರವರ ಹೊಣೆ, ಜವಾಬ್ದಾರಿ ಹಾಗೂ ಕರ್ತವ್ಯಗಳನ್ನು ನಿಭಾಯಿಸಲು ಅಗತ್ಯವಾದ ಜ್ಞಾನ, ಮನೋಭಾವ ಹಾಗೂ ಕೌಶಲ್ಯಗಳನ್ನು ಪಡೆದುಕೊಳ್ಳಲು ಅನುವಾಗುವಂತೆ ಸಾಮರ್ಥ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಹಾಗೂ ಅವುಗಳು

ಆಯಾ ಕಾಲಕ್ಕೆ, ಗುಂಪಿಗೆ, ಅಗತ್ಯವಿರುವವರಿಗೆ ಅನುಗುಣವಾಗಿ ನವೀಕರಿಸಲ್ಪಡಬೇಕು.

(ಲೇಖಕರು ದುಡಿಯುವ ಮಕ್ಕಳ ಹಿತರಕ್ಷಣಾ ಕಾರ್ಯಕರ್ತೆ)